ಮಾಡಿದರೂ ಅದರಿಂದ ವಿಚಲಿತನಾಗದೆ, ಪ್ರೀತಿ ಕಮರಿಹೋಗದಂತೆ ನೋಡಿಕೊಳ್ಳಬಲ್ಲ ಗಟ್ಟಿಗ.

ಇಂಥ ಕಥಾನಾಯಕಿ ಸೀಕ್ರೇಟ್ ಸೂಪರ್ ಸ್ಟಾರ್ ಆಗುವ ಆಧುನಿಕ ದಾರಿಯ ಅನಾವರಣದಲ್ಲಿ ಇರುವುದು ಕುತೂಹಲ.

ನಿರ್ದೇಶಕರಿಗೆ ತಮ್ಮ ಕಥಾವಸ್ತುವಿನ ಕೇಂದ್ರದ ಮೇಲೆ ಹಿಡಿತ ಸಿಕ್ಕಿದೆ. ಅದು ಸಂಗೀತವೇ ಹೌದು. ಅದಕ್ಕೆ ಅವರು ಕೌಟುಂಬಿಕ ನೆಲೆಯಲ್ಲಿ ನಡೆಯುವ ಹೋರಾಟದ ಇಂಧನ ಒದಗಿಸಿದ್ದಾರೆ. ಸಂಕಷ್ಟವು ಹೋರಾಟದ ಮಟ್ಟಕ್ಕೆ ಏರಬೇಕಾದರೆ ಒಬ್ಬ ವಿಲನ್ ಬೇಕಲ್ಲ; ಅದಕ್ಕೇ ಅವರು ಹುಡುಗಿಯ ಅಪ್ಪನನ್ನು ವಿಲನ್ ಮಾಡಿರುವುದು.

ಸಾಮಾನ್ಯವಾಗಿ ಹೆಣ್ಣುಮಕ್ಕಳು ಅಪ್ಪನ ಜತೆ ಹೆಚ್ಚು ಬಾಂಧವ್ಯ ಬೆಳೆಸಿಕೊಳ್ಳುತ್ತಾರೆ. ಈ ಸಿನಿಮಾದಲ್ಲಿ ತದ್ವಿರುದ್ಧ. ಅಪ್ಪ ಕಲ್ಲುಹೃದಯಿ. ಕೆಲಸಕ್ಕೆ ಹೋಗುವುದು, ದಣಿದು ಬರುವುದು, ಹೆಂಡತಿಗೆ ಒಡಿಯುವುದು, ಮಕ್ಕಳನ್ನು ದಂಡಿಸುವುದು, ಸಂಪ್ರದಾಯದ ಗೂಡಿನಲ್ಲೇ ಧರ್ಮದ ದೀಪ ಹಚ್ಚುವುದು ಅವನ ಸ್ವಭಾವ. ಅವನ ಸಂಸಾರದ ಉಳಿದವರೆಲ್ಲ ವಿಶೇಷವಾಗಿ ಮೂರು ಹೆಣ್ಣುಜೀವಗಳು; ಅವನ ಅಮ್ಮ, ಹೆಂಡತಿ, ಮಗಳು ಸ್ವಾತಂತ್ರ್ಯಕ್ಕಾಗಿ ಹಪಹಪಿಸುವವರು.

ಈ 'ಬ್ಲ್ಯಾಕ್ ಆ್ಯಂಡ್ ವೈಟ್' ಭಿತ್ತಿಯು ಸೀಕ್ರೇಟ್ ಸೂಪರ್ ಸ್ಟಾರ್ ಆಗಹೊರಟಿರುವ ಹುಡುಗಿಗೆ ಅಗತ್ಯ ಹೋರಾಟದ ಭೂಮಿಕೆ ಕಲ್ಪಿಸುತ್ತದೆ. ಸಮಕಾಲೀನ ವಸ್ತುವಿಗೆ ಭಾರತೀಯತೆಯ ಲೇಪ ಕೊಡುವ ಜಾಣತನವಿದು.

ಹುಡುಗಿ ನಲುಗಬೇಕು. ಅವಳು ಸ್ವಾತಂತ್ರ್ಯ ದಕ್ಕಿಸಿಕೊಡಲು ಹೊರಟಿರುವ ಅಮ್ಮನೂ ಕಮರಬೇಕು. ಅಪ್ಪನ ತಾಲ್ಲುಕಿತದಲ್ಲಿ ಎಲ್ಲ ಕನಸುಗಳೂ ಜರ್ಜರಿತವಾಗಬೇಕು. ಇಷ್ಟೆಲ್ಲ ಆದಮೇಲೆ ಒಬ್ಬ ಮಾಂತ್ರಿಕನ ಸಹಾಯ ಸಿಗಬೇಕು. ಅವನು ಸಹೃದಯಿ ಆಗಿರಲೇಬೇಕು.

'ಸೀಕ್ರೇಟ್ ಸೂಪರ್ ಸ್ಟಾರ್' ಚಿತ್ರದಲ್ಲಿ ಕಬೀರ್ ಸಾಜಿದ್, ಮೆಹೆರ್ ವಿಜ್, ಜೈರಾ ವಸೀಂ

